# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 475 |
| **ಮಾನ್ಯ ಸದಸ್ಯರ ಹೆಸರು** | ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | 19/02/2024 |
| **ಉತ್ತರಿಸಬೇಕಾದ ಸಚಿವರು** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ ಆರೋಗ್ಯ ಕೇಂದ್ರಗಳಲ್ಲಿ (ಪ್ರಾಥಮಿಕ, ಸಮುದಾಯ) ಖಾಲಿ ಇರುವ ಎಂ.ಬಿ.ಬಿ.ಎಸ್ ವೈದ್ಯರ ಹುದ್ದೆಗೆ ಎದುರಾಗಿ ಆಯುಷ್ ವೈದರನ್ನು ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | **ಬಂದಿದೆ.** |
| ಆ) | ಬಂದಿದ್ದಲ್ಲಿ, ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಆಯುಷ್ ವೈದ್ಯರನ್ನು ನೇಮಿಸಲು ಕಾರಣಗಳೇನು: ಇದಕ್ಕೆ ನಿಯಮಗಳಲ್ಲಿ ಅವಕಾಶವಿದೆಯೇ: (ಈ ಬಗ್ಗೆ ಸಂಪೂರ್ಣ ವಿವರ ನೀಡುವುದು ಹಾಗೂ ಎಂ.ಬಿ.ಬಿ.ಎಸ್ ವೈದ್ಯರ ಹುದ್ದೆಗೆ ಎದುರಾಗಿ ನೇಮಿಸಲಾದ ಆಯುಷ್ ವೈದ್ಯರ ಸಂಖ್ಯಾ ವಿವರವನ್ನು ಜಿಲ್ಲಾವಾರು ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಆಕುಕ 359 ಹೆಚ್‌ಎಸ್ ಹೆಚ್ 2016 ದಿನಾಂಕ: 01.08.2016 ರಲ್ಲಿ ಖಾಯಂ ವೈದ್ಯರನ್ನು ನೇಮಿಸಿಕೊಳ್ಳುವವರೆಗೆ ಕೆಲವು ಷರತ್ತುಗಳಿಗೊಳಪಟ್ಟು ರೋಸ್ಟರ್ ಮತ್ತು ಮೆರಿಟ್ ನಿಯಮಗಳನ್ನು ಅನುಸರಿಸಿ ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಆಯುಷ್ ವೈದ್ಯರನ್ನು ನೇಮಿಸಲು ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.<br>(ಅನುಬಂಧ-1ರಲ್ಲಿ ನೀಡಲಾಗಿದೆ)<br><br>ಶಿವಮೊಗ್ಗ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಯಾವುದೇ ಆಯುಷ್ ವೈದ್ಯರು ಕಾರ್ಯನಿರ್ವಹಿಸುತ್ತಿರುವುದಿಲ್ಲ.<br><br>ಪ್ರಸ್ತುತ ಆಯುಷ್ ವೈದ್ಯರನ್ನು ಎಂ.ಬಿ.ಬಿ.ಎಸ್ ವೈದ್ಯರ ಹುದ್ದೆಗೆ ಎದುರಾಗಿ ನೇಮಿಸಿಕೊಳ್ಳುತ್ತಿಲ್ಲ.<br><br>ಸರ್ಕಾರ ಆದೇಶದ ದಿನಾಂಕ:01.08.2016ರ ಅನುಸಾರ ಹಾಸನ / ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ 2015, 2016 ಮತ್ತು 2018 ನೇ ಸಾಲಿನಲ್ಲಿ ಎಂ.ಬಿ.ಬಿ.ಎಸ್ ವೈದ್ಯರ ಹುದ್ದೆಗೆ ಎದುರಾಗಿ ಆಯುಷ್ ವೈದ್ಯರುಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿದ್ದು ಕಾರ್ಯನಿರ್ವಹಿಸುತ್ತಿದ್ದಾರೆ ಪ್ರಸ್ತುತ ಯಾವುದೇ ಆಯುಷ್ ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ಮೇಲೆ ನೇಮಿಸಿಕೊಂಡಿರುವುದಿಲ್ಲ.<br><br>**ಆಯುಷ್ ವೈದ್ಯರ ಜಿಲ್ಲಾವಾರು ಮಾಹಿತಿ:** |

| ಕ್ರ.ಸ | ಜಿಲ್ಲೆ | ಸಂಖ್ಯೆ |
|---|---|---|
| 1. | ಹಾಸನ | 1 |
| 2. | ಚಿಕ್ಕಮಗಳೂರು | 2 |
| 3. | ಶಿವಮೊಗ್ಗ | 1 |

Scanned with OKEN Scanner

| | | |
|---|---|---|
| ಇ) | ಆಯುಷ್ ವೈದ್ಯರು ಅಲೋಪತಿ ಔಷಧವನ್ನು ಶಿಫಾರಸ್ಸು ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಿದ್ದರೂ ವಿವಿಧ ಆರೋಗ್ಯ ಕೇಂದ್ರಗಳಿಗೆ ನೇಮಕವಾದ ಸಾಕಷ್ಟು ವೈದ್ಯರು ವಿವಿಧ ಖಾಯಿಲೆಗಳಿಗೆ ಅತಾರ್ಕಿಕವಾಗಿ ಚಿಕಿತ್ಸೆ ನೀಡುತ್ತಿದ್ದು ಅಲೋಪತಿ ಔಷಧವನ್ನು ಶಿಫಾರಸ್ಸು ಮಾಡುತ್ತಿರುವುದರ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ವಿವರ ನೀಡುವುದು) | ಕೆ.ಪಿ.ಎಂ.ಇ ಅಧಿನಿಯಮ 2007 ಸೆಕ್ಷನ್ 2 (ಕೆ) ಪ್ರಕಾರ, ವೈದ್ಯರು ತಾವು ವ್ಯಾಸಂಗ ಮಾಡಿದ, ಅರ್ಹತೆ ಪಡೆದ ಮತ್ತು ನೋಂದಾಯಿತನಾದ ವೈದ್ಯ ಪದ್ಧತಿಯಲ್ಲೆ ವೈದ್ಯ ವೃತ್ತಿ ಮಾಡಲು ಅವಕಾಶವಿರುತ್ತದೆ.<br><br>ಆಯುಷ್ ವೈದ್ಯರು ಅಲೋಪತಿ ಔಷಧಿಯನ್ನು ಶಿಫಾರಸ್ಸು ಮಾಡಲು ಕೆ.ಪಿ.ಎಂ.ಇ ಕಾಯ್ದೆಯಡಿ ಅವಕಾಶವಿರುವುದಿಲ್ಲ.<br>(ಕೆಪಿಎಂಇ ಕಾಯ್ದೆಯ ಪ್ರತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ) |
| ಈ) | ರಾಜ್ಯದಲ್ಲಿ ಆಯುಷ್ ವೈದ್ಯರಿಗೆ ಪ್ರಾಥಮಿಕ ಚಿಕಿತ್ಸೆಗಾಗಿ ಆಲೋಪತಿ ಔಷಧಗಳನ್ನು ನೀಡಲು ಅನುಮತಿ/ ಅವಕಾಶ ಇದೆಯೇ: | |
| ಉ) | ಮಹಿಳಾ ಆಯುಷ್ ವೈದ್ಯರು ಪ್ರಸವ ಪೂರ್ವ ತಪಾಸಣೆಯಲ್ಲಿ ತೊಡಗಿರುವುದು ಹಾಗೂ ಆಲೋಪತಿ ಔಷಧಗಳನ್ನು ಶಿಫಾರಸ್ಸು ಮಾಡುತ್ತಿದ್ದಾರೆ ಎನ್ನುವ ಗಂಭೀರ ಆರೋಪಗಳ ಕುರಿತು ಸರ್ಕಾರ ಯಾವ ರೀತಿಯ ಕಠಿಣ ಕ್ರಮಗಳನ್ನು ಕೈಗೊಳ್ಳಲಿದೆ' (ಸಂಪೂರ್ಣ ಮಾಹಿತಿ ನೀಡುವುದು) | |

**ಆಕುಕ 19 ಹೆಚ್ ಎಸ್ ಡಿ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.**

Scanned with OKEN Scanner

ಅನುಬಂಧ – 1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳ ಎದುರು ಆಯುಷ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ: ಆಕುಕ 563 ಹೆಚ್‌ಎಸ್‌ಹೆಚ್ 2011 ದಿನಾಂಕ: 07.01.2012.
2. ಸರ್ಕಾರಿ ಆದೇಶ ಸಂಖ್ಯೆ:ಆಕುಕ 316 ಹೆಚ್‌ಎಸ್‌ಹೆಚ್ 2012 ದಿನಾಂಕ: 27.06.2012
3. ಸರ್ಕಾರಿ ಆದೇಶ ಸಂಖ್ಯೆ: ಆಕುಕ 458 ಹೆಚ್‌ಎಸ್‌ಹೆಚ್ 2012 ದಿನಾಂಕ: 19.10.2012
4. ಸರ್ಕಾರಿ ಆದೇಶ ಸಂಖ್ಯೆ:ಆಕುಕ 458 ಹೆಚ್‌ಎಸ್‌ಹೆಚ್ 2012 ದಿನಾಂಕ: 28.06.2013
5. ಸರ್ಕಾರದ ಆದೇಶ ಸಂಖ್ಯೆ: ಆಕುಕ 4 ಹೆಚ್‌ಎಸ್‌ಹೆಚ್ 2014 ದಿನಾಂಕ: 01.03.2014
6. ಸರ್ಕಾರಿ ಆದೇಶ ಸಂಖ್ಯೆ:ಆಕುಕ 479 ಹೆಚ್‌ಎಸ್‌ಹೆಚ್ 2014 ದಿನಾಂಕ: 06.01.2015
7. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಅವರ ಪ್ರಸ್ತಾವನೆ ಸಂಖ್ಯೆ: ಜೆಆರ್‌ಪಿ(1ಎ)/175/2012-13 ದಿನಾಂಕ: 20.08.2014
8. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಅವರ ಪತ್ರ ಸಂಖ್ಯೆ: ಜೆಆರ್‌ಪಿ(1)(ಎ) 101/2012-13 ದಿನಾಂಕ: 13/01/2016 ಮತ್ತು 16/04/2016
9. ಸರ್ಕಾರಿ ಆದೇಶ ಸಂಖ್ಯೆ: ಆಕುಕ 297 ಹೆಚ್‌ಎಸ್‌ಹೆಚ್ 2016 ದಿನಾಂಕ: 21.04.2016.

ಪ್ರಸ್ತಾವನೆ:

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇದ್ದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ಹಿರಿಯ ವೈದ್ಯಾಧಿಕಾರಿ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (6) ಮತ್ತು (9) ರಲ್ಲಿನ ಆದೇಶಗಳಲ್ಲಿ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿತ್ತು. ಆದರೆ, ಈ ನೇಮಕಾತಿ ಪ್ರಕ್ರಿಯೆಗೆ ಸಾಕಷ್ಟು ಅಭ್ಯರ್ಥಿಗಳು ಸ್ಪಂದಿಸಿರುವುದಿಲ್ಲ.

ಕರ್ನಾಟಕ ಲೋಕ ಸೇವಾ ಆಯೋಗಕ್ಕೆ 983 ತಜ್ಞ ವೈದ್ಯರ ಹುದ್ದೆಗಳನ್ನು 331 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಹಾಗು 87 ದಂತ ಆರೋಗ್ಯಾಧಿಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸುವಂತೆ ಕೋರಲಾಗಿತ್ತು. ಆದರೆ, ಕರ್ನಾಟಕ ಲೋಕ ಸೇವಾ ಆಯೋಗವು 713 ತಜ್ಞ ವೈದ್ಯರುಗಳನ್ನು 324 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಹಾಗೂ 85 ದಂತ ಆರೋಗ್ಯಾಧಿಕಾರಿಗಳನ್ನು ಆಯ್ಕೆ ಮಾಡಿ ಕಳುಹಿಸಿರುತ್ತದೆ. ಇವರುಗಳಿಗೆ ನೇಮಕಾತಿ ಆದೇಶ ನೀಡಿದ್ದರೂ ಸಹ ಬಹಳಷ್ಟು ಜನ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳ ಎದುರು ಸಾರ್ವಜನಿಕ ಹಿತದೃಷ್ಟಿಯಿಂದ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಖಾಯಂ ವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳುವವರೆಗೆ ಆಯುಷ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಬಗ್ಗೆ ಆಯಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 359 ಹೆಚ್‌ಎಸ್‌ಹೆಚ್ 2016,
ಬೆಂಗಳೂರು, ದಿನಾಂಕ: 01/08/2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಖಾಯಂ ವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳುವವರೆಗೆ ಈ ಕೆಳಕಂಡ ಷರತ್ತಿಗಳಿಗೊಳಪಟ್ಟು, ತಾತ್ಕಾಲಿಕವಾಗಿ ರೋಸ್ಟರ್ ಮತ್ತು ಮೆರಿಟ್ ನಿಯಮಗಳನ್ನು

...2

Scanned with OKEN Scanner

ಅನುಸರಿಸಿ, ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿಯಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳ ಎದುರು ಆಯುಷ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳಿಗೆ ಸರ್ಕಾರವು ಈ ಮೂಲಕ ಅನುಮತಿ ನೀಡಿದೆ.

(1) ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಆಯುಷ್ ವೈದ್ಯರನ್ನು ಯಾವುದೇ ಕಾರಣಕ್ಕೂ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಳಿಸಲಾಗುವುದಿಲ್ಲ ಎಂಬುದನ್ನು ಗುತ್ತಿಗೆ ನೇಮಕಾತಿ ಆದೇಶದಲ್ಲಿ ಕಡ್ಡಾಯವಾಗಿ ನಮೂದಿಸಿ ಸ್ಪಷ್ಟವಾಗಿ ತಿಳಿಸತಕ್ಕದ್ದು.

(2) ಈ ಗುತ್ತಿಗೆ ಆಧಾರಿತ ನೇಮಕಾತಿಯು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಖಾಯಂ ವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳುವವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಹಾಗೂ ಕೌನ್ಸಿಲಿಂಗ್ ಸಂದರ್ಭದಲ್ಲಿ ಸದರಿ ಹುದ್ದೆಗಳನ್ನು ಖಾಲಿ ಹುದ್ದೆಗಳೆಂದು ಪ್ರಚುರಪಡಿಸಿ, ಅರ್ಹ ಖಾಯಂ ವೈದ್ಯರು ಸದರಿ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸತಕ್ಕದ್ದು. ಈ ಸಂದರ್ಭದಲ್ಲಿ ಕೆಲಸ ಕಳೆದುಕೊಳ್ಳುವ ಗುತ್ತಿಗೆ ಆಯುಷ್ ವೈದ್ಯಾಧಿಕಾರಿಗಳನ್ನು ಅದೇ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಮುಂದುವರಿಸುವುದು. ಒಂದು ವೇಳೆ ಹುದ್ದೆ ಖಾಲಿಯಿಲ್ಲದಿದ್ದಲ್ಲಿ ಅವರ ಗುತ್ತಿಗೆ ಸೇವೆಯನ್ನು ಮೊಟಕುಗೊಳಿಸತಕ್ಕದ್ದು.

(3) ಮಂಜೂರಾದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಯ ಎದುರಿಗೆ ಮಾತ್ರ ನೇಮಿಸುವುದು.

(4) ಯಾವುದೇ ವೈದ್ಯಾಧಿಕಾರಿ 4 ತಿಂಗಳಿಗೂ ಮೇಲ್ಪಟ್ಟು ಅನಧಿಕೃತ ಗೈರುಹಾಜರಾಗಿದ್ದಲ್ಲಿ ಅಥವಾ ಅಮಾನತ್ತಿನಲ್ಲಿದ್ದಲ್ಲಿ ಆ ಹುದ್ದೆಯ ಎದುರಿಗೆ ನೇಮಿಸಬಹುದಾಗಿದೆ.

(5) ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿದ ವಯೋಮಿತಿ ಮೀರಿದ್ದರೂ ಸಹ ಅಂತಹವರನ್ನು ಗುತ್ತಿಗೆ ವೈದ್ಯರಾಗಿ ಮಾಸಿಕ ರೂ.26,000/-ಗಳ ಗೌರವ ಸಂಭಾವನೆಯೊಂದಿಗೆ ನೇಮಿಸಬಹುದು.

(6) ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಆಯುಷ್ ವೈದ್ಯಾಧಿಕಾರಿಗಳಿಗೆ ಮಾಸಿಕ ರೂ. 26,000/- ಗಳ ಸಂಚಿತ ವೇತನವನ್ನು ನಿಗದಿಪಡಿಸಿದೆ ಹಾಗೂ ಯಾವುದೇ ಭತ್ಯೆಗಳನ್ನು ನೀಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ಎನ್. ನರಸಿಂಹರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)

ಇವರಿಗೆ:

1. ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು-560 001.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು-560 009.
3. ಅಭಿಯಾನ ನಿರ್ದೇಶಕರು, ಎನ್.ಆರ್.ಹೆಚ್.ಎಂ./ಯೋಜನಾಅಭಿವೃದ್ಧಿಕಾರಿ, ಕೆಹೆಚ್‌ಎಸ್‌ಡಿಆರ್‌ಪಿ., ಬೆಂಗಳೂರು
4. ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು
4. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
5. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತ್
6. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

Scanned with OKEN Scanner

ಅನುಬಂಧ - 2



**2007ರ ಕರ್ನಾಟಕ ಅಧಿನಿಯಮ ಸಂಖ್ಯೆ 21**

(2007ರ ಆಗಸ್ಟ್ ಹದಿನಾರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007**

(2007ರ ಆಗಸ್ಟ್ ಹದಿಮೂರನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)

(2010ರ ಅಧಿನಿಯಮ ಸಂಖ್ಯೆ 33, 2012ರ 37, 2018ರ 01 ಹಾಗೂ 2020ರ 33ರಲ್ಲಿ ತಿದ್ದುಪಡಿಯಾದಂತೆ)

ಕರ್ನಾಟಕ ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪುರೋಭಿವೃದ್ಧಿ ಮತ್ತು ಅವುಗಳ ಮೇಲ್ವಿಚಾರಣೆಗೆ ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಸಾರ್ವಜನಿಕರ ಹಿತದೃಷ್ಟಿಯಿಂದ ಉತ್ತಮ ಗುಣಮಟ್ಟದ ಆರೋಗ್ಯಪಾಲನೆಗೆ ಉತ್ತೇಜನ ನೀಡುವುದು ಮತ್ತು ವೈದ್ಯ ಧರ್ಮದ ತತ್ವಗಳಿಗನುಸಾರವಾಗಿ ಖಾಸಗಿ ವೈದ್ಯಕೀಯ ಸಂಸ್ಥೆಗಳು ಒದಗಿಸಬೇಕಾದ ಸೇವೆಯ ಗುಣಮಟ್ಟಗಳನ್ನು ನಿಗದಿಪಡಿಸುವ ಮೂಲಕ ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳ ವ್ಯವಹಾರಗಳನ್ನು ಕಾನೂನಿನ ಮೂಲಕ ನಿಯಂತ್ರಿಸಿ ಮೇಲ್ವಿಚಾರಣೆ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1]ದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1 ಈ ಅಧಿನಿಯಮವು ದಿನಾಂಕ: 10.11.2009ರಿಂದ ಅಧಿಸೂಚನೆ ಸಂಖ್ಯೆ [illegible] 94 [illegible] 1005 [illegible]

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಪೀಲು ಪ್ರಾಧಿಕಾರ" ಎಂದರೆ, 16ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಪೀಲು ಪ್ರಾಧಿಕಾರ;

(ಬಿ) "ಗೊತ್ತುಪಡಿಸಲಾದ ದಿನ" ಎಂದರೆ, 1ನೇ ಪ್ರಕರಣದ (2)ನೇ ಉಪ-ಪ್ರಕರಣದಡಿ ಗೊತ್ತುಪಡಿಸಲಾದ ದಿನಾಂಕ;

(ಸಿ) "ಚಿಕಿತ್ಸಾ ಪ್ರಯೋಗಾಲಯ" ಎಂದರೆ,-

(i) ಜೀವ ವೈಜ್ಞಾನಿಕ (ರೋಗಪತ್ತೆ ಶಾಸ್ತ್ರದ), ಸೂಕ್ಷ್ಮಾಣು ಜೀವಿಶಾಸ್ತ್ರದ, ಕ್ಷ-ಕಿರಣ, ಸೂಕ್ಷ್ಮದರ್ಶಿ, ರಾಸಾಯನಿಕ ಅಥವಾ ಇತರೇ ಪರೀಕ್ಷೆಗಳನ್ನು, ತಪಾಸಣೆಗಳನ್ನು ಅಥವಾ ವಿಶ್ಲೇಷಣೆಗಳನ್ನು ಮಾಡುವ, ಅಥವಾ

(ii) ಸೂಕ್ಷ್ಮಜೀವಿ ಕಲ್ಚರ್‌ಗಳು, ರಸಿಕೆಗಳು, ಲಸಿಕೆಗಳು ಅಥವಾ ಇತರ ಜೀವಶಾಸ್ತ್ರ ಅಥವಾ ಸೂಕ್ಷ್ಮಾಣು ಜೀವಿಶಾಸ್ತ್ರದ ಉತ್ಪನ್ನಗಳನ್ನು ರೋಗಗಳ ಪತ್ತೆ ಅಥವಾ ಚಿಕಿತ್ಸೆಯ ಸಂಬಂಧದಲ್ಲಿ ತಯಾರಿಸುವುದು ಅಥವಾ ಮಾಡಿಕೆಯಾಗಿ ತಯಾರಿಸುವುದನ್ನು ಮಾಡುವ;

Scanned with OKEN Scanner

– ಒಂದು ಸಂಸ್ಥೆ;

(ಡಿ) "ಚಿಕಿತ್ಸಾ ದಾಖಲೆಗಳು" ಎಂದರೆ, ಮಾನವ ಶರೀರ ಅಥವಾ ಅದರ ಯಾವುದೇ ಒಂದು ಭಾಗ ಅಥವಾ ಅದರಿಂದ ತೆಗೆದುಕೊಳ್ಳಲಾಗುವ ಯಾವುದೇ ವಸ್ತುವಿನ ಯಾವುದೇ ಸ್ಥಿತಿಗತಿಯನ್ನು ಮತ್ತು ಆ ವ್ಯಕ್ತಿಗೆ ನೀಡಲಾದ ಅಥವಾ ಆತ ಒಳಗಾದ ಚಿಕಿತ್ಸೆಯ ಕ್ರಮವನ್ನು ಸೂಚಿಸಲು ಮತ್ತು ಪತ್ತೆ ಹಚ್ಚಲು, ಅಥವಾ ಅರ್ಥ ಮಾಡಿಕೊಳ್ಳಲು ಬಳಸಬಹುದಾದಂಥ ಯಾವುದೇ ಕಾಗದ, ಮುದ್ರಿತ ಫಿಲ್ಮು, ಸ್ಲೈಡು, ದ್ರಾವಣ ಅಥವಾ ಮಾಧ್ಯಮ.

(ಇ) "ಇಲಾಖೆ" ಎಂದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಥವಾ ಸಂದರ್ಭಾನುಸಾರ ಕರ್ನಾಟಕ ಸರ್ಕಾರದ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ;

(ಎಫ್) "ಕುಟುಂಬದ ಸದಸ್ಯ" ಎಂದರೆ, ಗಂಡ ಅಥವಾ ಹೆಂಡತಿ ಅಥವಾ ಯಾವೊಬ್ಬ ಮಗ, ಮಗಳು ಅಥವಾ ಯಾವೊಬ್ಬ ಇತರ ಕಾನೂನು ಸಮ್ಮತ ವಾರಸುದಾರ ಅಥವಾ ಆತನ ವಯಸ್ಸನ್ನು ಗಣನೆಗೆ ತೆಗೆದುಕೊಳ್ಳದೆ ಕಾನೂನು ಸಮ್ಮತ ಸಂರಕ್ಷಕ.

[(ಎಫ್-1) "ಕುಂದುಕೊರತೆ" ಎಂದರೆ, ರೋಗಿಯ ಚಾರ್ಟರ್ ಅಥವಾ ಖಾಸಗಿ ವೈದ್ಯಕೀಯ ಚಾರ್ಟರನ್ನು ಪಾಲಿಸದೇ ಇರುವ ಸಂಬಂಧದಲ್ಲಿಯ ಯಾವುದೇ ದೂರು;]

(ಜಿ) "ಆರೋಗ್ಯಕಾರಿ" ಎಂದರೆ, ಉತ್ತಮ ಆರೋಗ್ಯಕ್ಕೆ ಅನುಕೂಲಕರವಾದ ಒಂದು ಪರಿಸ್ಥಿತಿ;

[''(ಎಚ್) "ಪರಿಶೀಲನಾ ಸಮಿತಿ" ಎಂದರೆ, 7ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ಪರಿಶೀಲನಾ ಸಮಿತಿ;'']

(ಐ) ಖಾಸಗಿ ವೈದ್ಯಕೀಯ ಸಂಸ್ಥೆಗೆ ಸಂಬಂಧಿಸಿದಂತೆ "ವ್ಯವಸ್ಥಾಪಕ" ಎಂದರೆ, ಆತನ ಹೆಸರು ಅಥವಾ ಪದನಾಮ ಯಾವುದೇ ಇರಲಿ, ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ನಡೆಸುವ ಅಥವಾ ನಿರ್ವಹಣೆಯ ಪ್ರಭಾರವನ್ನು ಹೊಂದಿರುವ ಅಥವಾ ವಹಿಸಿಕೊಂಡಿರುವ, ಒಬ್ಬ ವ್ಯಕ್ತಿ;

(ಜೆ) "ಪ್ರಸೂತಿ ಗೃಹ" ಎಂದರೆ, ಶಿಶುಜನನಕ್ಕೆ ಸಂಬಂಧಿಸಿದಂತೆ ಹೆರಿಗೆಗಾಗಿ ಮತ್ತು ಗರ್ಭಿಣಿಯರ ಪೂರ್ವದ ಅಥವಾ ಬಾಣಂತಿಯರ ಶುಶ್ರೂಷೆಯ ಉದ್ದೇಶಕ್ಕಾಗಿ ಸಾಮಾನ್ಯವಾಗಿ ಮಹಿಳೆಯರನ್ನು ಬರಮಾಡಿಕೊಳ್ಳುವ ಅಥವಾ ದಾಖಲು ಮಾಡಿಕೊಳ್ಳುವ ಅಥವಾ ಇವೆರಡಕ್ಕಾಗಿಯೂ ಇರುವ ಸಂಸ್ಥೆ ಹಾಗೂ ಇದು ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗಾಗಿ ಅಥವಾ ವೈದ್ಯಕೀಯ ಗರ್ಭಪಾತದ ಉದ್ದೇಶಕ್ಕಾಗಿ ಮಹಿಳೆಯರನ್ನು ಬರಮಾಡಿಕೊಳ್ಳುವ ಅಥವಾ ದಾಖಲುಮಾಡಿಕೊಳ್ಳುವ ಸಂಸ್ಥೆಯನ್ನೂ ಒಳಗೊಳ್ಳುತ್ತದೆ;

(ಕೆ) "ವೈದ್ಯವೃತ್ತಿಗ" ಎಂದರೆ, ವೈದ್ಯವೃತ್ತಿಗನು ತಾನು ವ್ಯಾಸಂಗ ಮಾಡಿದ, ಅರ್ಹತೆ ಪಡೆದ ಮತ್ತು ನೋಂದಾಯಿತನಾದ ವೈದ್ಯ ಪದ್ಧತಿಯಲ್ಲಿ ವೃತ್ತಿ ನಡೆಸುವುದಕ್ಕಾಗಿ ಹೋಮಿಯೋಪತಿ ವೃತ್ತಿಗರ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 35), ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಅಥವಾ ಯೋಗ ವೈದ್ಯ ವೃತ್ತಿಗರ ನೋಂದಣಿ ಮತ್ತು ವೈದ್ಯ ವೃತ್ತಿಗರ ಸಂಕೀರ್ಣ ಉಪಬಂಧಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 9), ವೈದ್ಯಕೀಯ ನೋಂದಣಿ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 34), ಭಾರತೀಯ ವೈದ್ಯ ಕೇಂದ್ರ ಪರಿಷತ್ತು ಅಧಿನಿಯಮ, 1970 (1970ರ ಕೇಂದ್ರ ಅಧಿನಿಯಮ 48) ಹೋಮಿಯೋಪತಿ ಕೇಂದ್ರ ಪರಿಷತ್ತು ಅಧಿನಿಯಮ, 1978 (1973ರ ಕೇಂದ್ರ ಅಧಿನಿಯಮ 59) ಮತ್ತು ವೈದ್ಯ ಪರಿಷತ್ತು ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 102) ಇವುಗಳಲ್ಲಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಕ್ತಿ ಮತ್ತು ದಂತವೈದ್ಯರುಗಳ ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ 16) ಅಡಿಯಲ್ಲಿ ನೋಂದಾಯಿತನಾದ ಒಬ್ಬ ದಂತವೈದ್ಯರನ್ನೂ ಸಹ ಒಳಗೊಳ್ಳುತ್ತದೆ.

Scanned with OKEN Scanner